ಅಸಲು ದಾವಾ ನಂ.168/2018

ಪಿ ಡಬ್ಲ್ಯ್ಯೂ1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 26-02-2019.

ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀ ಎನ್ ಜಿ ವಾದಿಯರ ಪರ ವಕೀಲರಿಂದ :

ಮೂರು ಪಹಣಿ ಪತ್ರಿಕೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-8 ರಿಂದ 10 ಎಂದು, ಮೂರು ಹಕ್ಕು ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ-11 ರಿಂದ 13 ಎಂದು , ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿಪಿ14 ಎಂದು ಗುರುತಿಸಲಾಯಿತು . ಕಾರಣ ದಾವೆಯನ್ನು ಡಿಕ್ರಿ ಮಾಡಬೇಕಾಗಿ ವಿನಂತಿ .

ಪಾಟೀ ಸವಾಲುಃ- ಶ್ರೀ ಟಿ ಕೆ ಹೆಚ್ 2 ನೇ ಪ್ರತಿವಾದಿ ಪರ ವಕೀಲರಿಂದ

ನಮ್ಮ ತಂದೆಗೆ ನಾವು ಇಬ್ಬರು ಮಕ್ಕಳು. ನಮ್ಮ ತಂದೆಗೆ ಮೂರು ಜನ ಸಹೋದರ ಮತ್ತು ಸಹೋದರಿಯರು ಇದ್ದಾರೆ . ದಾವಾ ಆಸ್ತಿಯ ಸರ್ವೆ ನಂಬರ್ , ಚೆಕಬಂಧಿ ಗೊತ್ತಿಲ್ಲ . ದಾವಾ ಆಸ್ತಿ ಮೂಲತಹ ನಮ್ಮ ತಾತನಿಗೆ ಸೇರಿದ ಆಸ್ತಿ . ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಹಾಗೂ ಆತನ ಸಹೋದರರ ಮಧ್ಯೆ ಈಗಾಗಲೇ ವಿಭಾಗವಾಗಿದ್ದರೂ ಸುಳ್ಳು ಕಾರಣ ನಮೂದಿಸಿ ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೂರು ಲಾಟು ಜಮೀನುಗಳು ಸೇರಿ ಹನ್ನೆರಡುವರೆ ಎಕರೆವರೆಗೆ ದಾವಾ ಆಸ್ತಿ ಇದೆ . ದಾವೆಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿ ಹಾಜರುಮಾಡಿದ್ದೇನೆಂದರೆ ಸರಿಯಲ್ಲ. ಸೃಷ್ಟಿಸಿದ ದಾಖಲೆಗಳ ಆಧಾರದಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- 1,3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಸಮಯವಕಾಶ ಕೋರಿದ್ದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಮುಂದೂಡಲಾಯಿತು .

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,